O.S. No. 222-2013
P.W. - 1

**ದಿನಾಂಕಃ 16-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಎ ಜಿ., ಮಾನ್ಯ ವಕೀಲರಿಂದ 2,3,4,8 ಮತ್ತು 9 ನೇ ಪ್ರತಿವಾದಿಗಳ ಪರವಾಗಿಃ-***

ಓ. ಎಸ್. ನಂಬರ 16/1972 ದಾವೆ ಸಿವಿಲ್ ನ್ಯಾಯಾಲಯದಲ್ಲಿ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ವಾದಿ ಮತ್ತು 2 ನೇ ಪ್ರತಿವಾದಿ ದಾಖಲಿಸಿದ್ದು ಸದರಿ ದಾವೆ ರಾಜಿಯಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿ ಮತ್ತು 2 ನೇ ಪ್ರತಿವಾದಿಗೆ ಎರಡು ಮಳಿಗೆಗಳು ಹಾಗೂ ಒಟ್ಟು 25 ಸಾವಿರ ಹಣ ಕೊಡುವುದರ ಮುಖಾಂತರ ರಾಜಿ ಆಗಿರುತ್ತದೆ ಅಂತಾ ನನ್ನ ತಾಯಿ ನನಗೆ ಹೇರುತ್ತಾರೆ. ಸದರಿ ದಾವೆಯಲ್ಲಿ ನಾನು ಪಾರ್ಟಿ ಆಗಿರಲಿಲ್ಲ. ನಾವು ಬಾವಸಾರ ಕ್ಷತ್ರಿಯ (ದರ್ಜಿ) ಜಾತಿಗೆ ಸೇರಿರುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ಬಾವಸಾರ ಕ್ಷತ್ರಿಯ ಜನರು ಬಟ್ಟೆ ಓಲೆಯುವ ಕೆಲಸ ಮಾಡುತ್ತಾರೆ ಎಂದರೆ ಸರಿ. ನನಗೆ ಟೇಲರಿಂಗ್ ಕೆಲಸ ಬರುವುದಿಲ್ಲ.

ನಮ್ಮ ಮಳಿಗೆ ಮುಂದೆ ಸಾಮಾನ್ಯವಾಗಿ ಜೋಗಿ ಜನರು ಕುಳಿರುತ್ತಾರೆ ಎಂದರೆ ಸರಿ. ಮಳಿಗೆಯ ಹತ್ತಿರ ಕಾಶಿಕ್ ಎಂಬ ಜೋಗಿಯ ತಂದೆತಾಯಿ ಇರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಾಶಿಕ್ ಎಂಬ ಜೋಗಿ ಇಲ್ಲಿಯವರಿಗೂ ಮಳಿಗೆ ಹತ್ತಿರ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಾಶಿಕ್ ಜೋಗಿ 2 ನೇ ಹಾಗೂ 8 ನೇ ಪ್ರತಿವಾದಿಯರಿಗೆ ಊಟ ತಂದು ಕೊಡುವುದು ಮತ್ತು ಅಡಿಗೆ ಮಾಡಿಕೊಡುವುದು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಬಮ್ಮನವಾಡಿ ಸ್ಟೇಷನ ರೋಡ್ ಬಳಿ ನನ್ನ ತಾಯಿಗೆ ಸೇರಿದ ಒಂದು ಮನೆ ಇತ್ತು ಎಂದರೆ ಸರಿ. ಸದರಿ ಮನೆಯನ್ನು ನನ್ನ ತಾಯಿ ಮಾರಿರುತ್ತಾರೆ. ಸದರಿ ಮನೆಯನ್ನು ಯಾವಾಗ ಮಾರಿರುತ್ತಾರೋ ನನಗೆ ಹೇಳಲು ಬರುವುದಿಲ್ಲ. ವಾದಿಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ. ಬಮ್ಮನವಾಡಿಯ ಮನೆಯನ್ನು ಮಾರಿ ವಾದಿಯ ಹೆಣ್ಣು ಮಕ್ಕಳ ಮದುವೆ ಮಾಡಲು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಎಷ್ಟಕ್ಕೆ ಮಾರಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಮಾರಾಟ ಮಾಡಿದ್ದ ಬಗ್ಗೆ ನನ್ನ ತಾಯಿ ನನಗೆ ಹೇಳಿದ್ದರು.

ಬೆಂಗಳೂರಿನಲ್ಲಿ ನಡೆಯುತ್ತಿದ್ದ ಸಭಾಪತಿ ಪ್ರೇಸ್ ಪ್ರಕರಣವನ್ನು ವಾದಿ ನೋಡಿ ಕೊಳ್ಳುತ್ತಿದ್ದರು. ಈಗ ನಾನು ನೋಡುತ್ತಿರುವ ಡಬ್ಲೂ. ಪಿ. ನಂಬರ 26606/1993 ಆದೇಶದ ಪ್ರತಿಯಾಗಿದ್ದು, ಸದರಿ ಆದೇಶದ ಪ್ರಕಾರ ಪ್ರಕರಣ ರಾಜಿಯಾಗಿರುತ್ತದೆ ಎಂದರೆ ಸರಿ. ಸದರಿ ಆದೇಶವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ನನ್ನ ತಾಯಿಯ ಉದ್ಯೋಗ ಬಿಜಿನೆಸ್ ಅಂತಾ ಬರೆದಿದೆ ಎಂದರೆ ಸಾಕ್ಷಿದಾರರು ಸುಳ್ಳು ಬರೆಯಲಾಗಿದೆ ಎಂದು ಹೇಳುತ್ತಾರೆ. ಸದರಿ ಪ್ರಕರಣದಲ್ಲಿ ವಾದಿ ಬರೆಸಿರುತ್ತಾರೆ ಎಂದರೆ ಸಾಕ್ಷಿದಾರರು ಸುಳ್ಳು ಬರೆಸಿರುತ್ತಾರೆ ಎಂದು ಹೇಳುತ್ತಾರೆ.

ಈಗ ನಾನು ನೋಡುತ್ತಿರುವ ಆಸ್ತಿ ತೆಗೆರಿ ರಿಸೀದಿ ಬೆರೂನ್ ಕಿಲ್ಲಾ ದಲ್ಲಿಯ ಆಸ್ತಿ ನಂಬರ 3-3-22 ಗೆ ಸಂಬಂಧಿಸಿದ್ದು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಬೆರೂನ ಕಿಲ್ಲಾದಲ್ಲಿ ಮನೆ ಇದ್ದರು ಸಹಿತ ಗೊತ್ತಿಲ್ಲ ಅಂತಾ ಸುಳ್ಳು ಹೆಲಳುತ್ತಿದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಹೇಳುವುದೆನೆಂದರೆ ನನ್ನ ತಾಯಿ ನನಗೆ ಪೆಟ್ಲಾ ಬುರ್ಜಯಲ್ಲಿ ಮನೆ ಇರುತ್ತದೆ ಅಂತಾ ಹೇಳಿದ್ದರು ಅಂತಾ ಹೇಳುತ್ತಾರೆ. ಪೆಟ್ಲಾ ಬುರ್ಜನ್ನು ಬೆರೂನ್ ಕಿಲ್ಲಾ

ಅಂತ ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪೆಟ್ಲಾ ಬುರ್ಜ ಮನೆ ನನ್ನ ತಾಯಿಗೆ ಹೆಸರಿಗೆ ಖರೀದಿ ಆಗಿತ್ತು ಎಂದರೆ ಸರಿ. ನನ್ನ ತಾಯಿಗೆ ವ್ಯಾಪಾರದಿಂದ ಆದಾಯ ಇದ್ದು ಆದಾಯದಿಂದ ಮನೆಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ವ್ಯಾಪಾರದ ಆದಾಯದಿಂದ ಎಲ್ಲಾರಿಗೂ ವಿದ್ಯಾಭ್ಯಾಸ ಮಾಡಿಸಿ ಎಲ್ಲಾರ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆಯನ್ನು ಸಹ ನನ್ನ ತಾಯಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮದುವೆಯನ್ನು ನನ್ನ ತಾಯಿಯ ತಂದೆ ಮಾಡಿರುತ್ತಾರೆ ಅಂತಾ ಹೇಳುತ್ತಾರೆ. ನನ್ನ ಮದುವೆಯನ್ನು ನನ್ನ ತಾತ ಮಾಡಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮಾತು ಕೇಳಿ 2 ನೇ ಪ್ರತಿವಾದಿ ನನ್ನ ತಾಯಿಯನ್ನು ಬೆದರಿಸುತ್ತಿದ್ದ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಮಳಿಗೆಯ ಬಾಡಿಗೆ ಹಣದಿಂದ ಆಸ್ತಿಯನ್ನು ಖರೀದಿಸಲಾಗಿದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮಕ್ಕಳನ್ನು ಬಿಟ್ಟು ಪುನಾಕ್ಕೆ ಹೋಗಿದ್ದ ಅಂತಾ ಸುಳ್ಳು ಹೇಳಿದ್ದೆ ಎಂದರೆ ಸರಿಯಲ್ಲ. ಅಲ್ಲಿಂದ ಬಂದ ನಂತರ 2 ನೇ ಪ್ರತಿವಾದಿ ನನ್ನ ತಾಯಿಯನ್ನು ಬೆದರಿಸಿ ತೊಂದರೆ ಕೊಡುತ್ತಿದ ಅಂತ ಸುಳ್ಳು ಹೆಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಪ್ರತಿವಾದಿ ನಂಬರ 3, 4 ಮತ್ತು 8 ರವರಿಗೆ ದಾವ ಆಸ್ತಿ ಕೊಡುವ ಮನಸ್ಸು ಇರಲಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆಸ್ತಿಯಾಗಿದ್ದರಿಂದ ಅವರಿಗೆ ಬರೆದುಕೊಡುವ ಹಕ್ಕು ಇರಲಿಲ್ಲ ಅಂತಾ ಹೇಳುತ್ತಾರೆ. ನನ್ನ ತಾಯಿ ಸ್ವತಃ ತನ್ನ ಆದಾಯದಿಂದ ಖರೀದಿಸಿದ ಆಸ್ತಿಗಳಾಗಿದ್ದರಿಂದ ಪ್ರತಿವಾದಿ 3, 4 ಮತ್ತು 8 ರವರಿಗೆ ಕೊಡುವ ಹಕ್ಕು ಅವರಿಗಿತ್ತೂ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮೃತಪಟ್ಟಿದ್ದು ವಾದಿಗೆ

ಹೆದರಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಪರ ಪಾಟೀ ಸವಾಲಿನಲ್ಲಿ ನಾನು ಒಪ್ಪಿ ಕೊಂಡಂತೆ ತಲಾ 3 ಲಕ್ಷ ಹಣ ಕೊಡುವುದಾಗಿ ಒಪ್ಪಿ ಕೊಂಡು ನಂತರ ಅಲ್ಲಗಳೆದಿರುತ್ತಾರೆ ಅಂತಾ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಖರೀದಿಸಿದ ಆಸ್ತಿಗಳಲ್ಲಿ ವಾದಿಗೂ ಮತ್ತು ನನಗೊ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಪ್ರತಿವಾದಿ ನಂಬರ 3, 4 ಮತ್ತು 8 ರವರಿಗೆ ಕೊಟ್ಟ ದಾವ ಶೆಡ್ಯೂಲ್ -2 ಆಸ್ತಿಗಳನ್ನು ಪ್ರಶ್ನಿಸಲು ನನಗೆ ಮತ್ತು ವಾದಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**